# ನನ್ನ ಓದು

# ತರ್ಕ, ಪ್ರಯೋಗ, ಆನ್ವಯಿಕತೆಯ ಕಣ್ಣೋಟದಲ್ಲಿ ಬಹುತ್ವದ ಶೋಧ



## ಅರುಣ್ ಜೋಳದಕೂಡ್ಲಿಗಿ

ಜಾಗತಿಕ ಗಮನ ಸೆಳೆದ ಚಿಂತಕ ಯುವಲ್ ನೋಹ ಹರಾರಿಯು '21ನೇ ಶತಮಾನ ಅತ್ಯಂತ ಅಸಮಾನ ಸಮಾಜವನ್ನು ಸೃಷ್ಟಿಸುತ್ತಿದೆ. ದೇಶಗಳ ನಡುವಿನ ಅಂತರ ಕಡಿಮೆಯಾಗಿ ವರ್ಗಗಳ ಅಂತರ ಹೆಚ್ಚಾಗುತ್ತಿದೆ. ಜಾತಿಗಳು ಜೈವಿಕ ಜಾತಿಗಳಾಗಿ ವಿಭಜನೆ ಹೊಂದುತ್ತಿವೆ. ಈಗಿರುವ ಅಸಮಾನತೆ ಶಿಲಾಯುಗದಷ್ಟು ಹಿಂದಕ್ಕೆ ಕರೆದೊಯ್ಯುತ್ತಿದೆ. ಭೂಮಿ ಮೇಲಿನ ಶೇ. 1ರಷ್ಟು ಶ್ರೀಮಂತರು ಜಗತ್ತಿನ ಅರ್ಧದಷ್ಟು ಸಂಪತ್ತನ್ನು ಹೊಂದಿದ್ದಾರೆ. ನೂರು ಜನ ಶ್ರೀಮಂತರು ನಾಲ್ಕು ಬಿಲಿಯನ್ ಜನರನ್ನು ನಿಯಂತ್ರಿಸುತ್ತಿದ್ದಾರೆ. ಅನಿಯಂತ್ರಿತ ಆರ್ಟಿಫಿಷಲ್ ಇಂಟೆಲಿಜೆನ್ಸ್ ಯುಗದಲ್ಲಿ ಸಮಾನತೆ, ಸ್ವಾತಂತ್ರ್ಯ, ಧರ್ಮ, ಸೆಕ್ಯುಲರಿಸಂ, ಬಹುತ್ವ ಎಲ್ಲವೂ ಆಲ್ಗಾರಿದಮ್ಮಿನ ತೋರಿಕೆಯ ಆಟಗಳಾಗಿ ಬದಲಾಗಿವೆ' ಎನ್ನುತ್ತಾನೆ. ವೈರುಧ್ಯವೆಂದರೆ ರಹಮತ್ ತರೀಕೆರೆ ಅವರು ಕರ್ನಾಟಕದಂತಹ ಪುಟ್ಟ ಭೂಪ್ರದೇಶದಲ್ಲಿ ಬಹುತ್ವದ ಬೀಜಗಳನ್ನು ಬಿತ್ತಿ ಬೆಳೆ ಬೆಳೆಯುವ ಕನಸು ಕಾಣುತ್ತಿದ್ದಾರೆ. ಈ ಭರವಸೆ ಮುಂದಣ ದಾರಿಯ ದಿಕ್ಕು ತೋರಲಿದೆ.

ಪ್ರೊ. ರಹಮತ್ ತರೀಕೆರೆ ಅವರು ಆರಂಭದ 'ಪ್ರತಿಸಂಸ್ಕೃತಿ'ಯಿಂದ ಮೊದಲುಗೊಂಡು ಈ ತನಕ ನಡೆಸಿದ ಅಧ್ಯಯನ, ಮಂಡಿಸಿದ ಚಿಂತನೆ, ಬಳಸಿದ ಆಕರ, ಲೋಕದ ಸುತ್ತಾಟ, ಜನರ ಜತೆಗಿನ ಒಡನಾಟ, ಹೀಗೆ ಈ ಎಲ್ಲದರ ಬಹು ಎಳೆಗಳನ್ನು ಪೋಣಿಸಿ ಬಹುತ್ವವೆಂಬ ಬಟ್ಟೆಯನ್ನು ಪುಸ್ತಕರೂಪದಲ್ಲಿ ನೇಯ್ದಿದ್ದಾರೆ. ಒಂದರ್ಥದಲ್ಲಿ ಇದು ಅವರ ಈ ತನಕದ ಓದು, ಸುತ್ತಾಟ, ಚಿಂತನೆಗಳ ನೆನಪಿನಿಂದ ಬಹುತ್ವದ ಸಂಕಥನವನ್ನು ಕಟ್ಟಿದಂತಿದೆ.

ರಹಮತ್ ತರೀಕೆರೆ ಅವರ ಈ ಮೊದಲಿನ 'ಪ್ರತಿಸಂಸ್ಕೃತಿ', 'ಕರ್ನಾಟಕದ ಸೂಫಿಗಳು', 'ನಾಥಪಂಥ', 'ಗುರುಪಂಥ', 'ಅಮೀರ್‌ಬಾಯಿ ಕರ್ನಾಟಕಿ', ಬೌದ್ಧ, ಮೊಹರಂ ಮತ್ತು ತಿರುಗಾಟದ ಕಥನ ಎಲ್ಲವೂ ಬಹುತ್ವದ ಶೋಧಗಳೇ. ಇಡಿಯಾಗಿ ತರೀಕೆರೆ ಅವರ